ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, " 2005ನೇ ಸಾಲಿನ ದಂಡದ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, " 2005ನೇ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಅನುಬಂಧ IV)

4. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮೇಲೆ ಚರ್ಚೆ, ಉತ್ತರ ಹಾಗೂ ಮತಕ್ಕೆ ಹಾಕುವುದು.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2005-06ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಅನ್ನು ಮಂಡಿಸಿದ್ದೇನೆ. ಪ್ರತಿ ಆರ್ಥಿಕ ವರ್ಷದಲ್ಲಿ ಬಜೆಟ್‌ನಲ್ಲಿ ನಾವು ಸೇರಿಸಲಿಕ್ಕೆ ಆಗದಿರುವಂತಹ ಹಣ, ಸಾಲದೇ ಹೋದಾಗ ಹೆಚ್ಚುವರಿಯಾಗಿ ಕೊಡಬೇಕಾಗಿರುವಂತಹದು, ಹೊಸ ಕಾರ್ಯಕ್ರಮಗಳಿಗೆ ಬಜೆಟ್‌ನಲ್ಲಿ ಹಣ ಒದಗಿಸದಿರುವಾಗ ಅದನ್ನು ಪೂರಕ ಅಂದಾಜುಗಳಲ್ಲಿ ಒದಗಿಸುವಂತಹದು, ಜೊತೆಗೆ ಕೆಲವು ಖರ್ಚುಗಳು ಅನಿರೀಕ್ಷಿತವಾಗಿ ಬರುತ್ತವೆ. ಇವೆಲ್ಲವನ್ನೂ ಕೂಡ ಸಾದಿಲ್ವಾರು ನಿಧಿಯಿಂದ ಮಂಜೂರು ಮಾಡಿ . . . . .

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪ ಮುಖ್ಯಮಂತ್ರಿಗಳು ಓದುತ್ತಿರುವ ಪೂರಕ ಅಂದಾಜುಗಳ ಪ್ರತಿಗಳು ನಮಗೆ ಬಂದಿಲ್ಲ.

ಅಧ್ಯಕ್ಷರು : ಅಜೆಂಡಾದಲ್ಲಿ ಕಳುಹಿಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇದರ ಮೇಲೆ ಚರ್ಚೆ ಮಾಡಬೇಕಾದರೆ ನಮಗೆ ಪ್ರತಿಗಳು ಬೇಕು. ನಮಗೆ ಪ್ರತಿಗಳು ಬಂದಿಲ್ಲ.

ಅಧ್ಯಕ್ಷರು : ಪ್ರತಿಗಳನ್ನು ಕೊಡಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ವಾಟಾಳ್ ನಾಗರಾಜ್ ಅವರೇ, ಅಜೆಂಡಾ ಜೊತೆಗೆ ಹೋಗಿರುತ್ತದೆ ನೋಡಿ.

ಶ್ರೀ ಜೆ. ಪಿ. ಮಾಧುಸ್ವಾಮಿ : ಇಲ್ಲ, ಬಂದಿಲ್ಲ.

ಶ್ರೀ ಸಿದ್ಧರಾಮಯ್ಯ : ಈಗ ಓದುತ್ತೇನೆ, ಪ್ರತಿಗಳನ್ನು ತಮಗೆ ತರಿಸಿಕೊಡುತ್ತಾರೆ. ಆಗಬಹುದೇ?

ಶ್ರೀ ವಾಟಾಳ್ ನಾಗರಾಜ್ : ಆಗಬಹುದು, ತಾವು ಓದಬಹುದು.

ಶ್ರೀ ಸಿದ್ಧರಾಮಯ್ಯ : ಹಾಗಾಗಿ ಈ ಎಲ್ಲಾ ಖರ್ಚುಗಳನ್ನು . . . . .

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ಒಂದು ಮನವಿ ಪ್ರತಿಗಳನ್ನು ನಮಗೆ ಕೊಡುವವರೆಗೆ ನಿಯಮ 69ರ ಪ್ರಕಾರ 45 ವಿಷಯಗಳ ಬಗ್ಗೆ ಚರ್ಚೆ ಮಾಡೋಣ.

ಅಧ್ಯಕ್ಷರು : ಈಗ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಬಹಳ ಪ್ರಮುಖವಾಗಿವೆ.

ಅಧ್ಯಕ್ಷರು : ಈಗ ಬೇಡ, ನಂತರ ಅದಕ್ಕೆ ಸಮಯವನ್ನು ಕೊಡುತ್ತೇನೆ. ಇದೆಲ್ಲಾ ಮುಗಿಯಲಿ.

ಶ್ರೀ ವಾಟಾಳ್ ನಾಗರಾಜ್ : ತಾವು ಅದಕ್ಕೆ ಖಂಡಿತವಾಗಿ ಸಮಯವನ್ನು ಕೊಡುವುದಾ?

ಅಧ್ಯಕ್ಷರು : ಡೆಫಿನೆಟ್ ಆಗಿ ಸಮಯವನ್ನು ನೀಡುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಈ ಪೂರಕ ಅಂದಾಜುಗಳಲ್ಲಿ ಒದಗಿಸಿರುವ ಹಣ ಒಂದು ಸಾವಿರದ ಮೂವತ್ಮೂರು ಕೋಟಿ ಹದಿನೈದು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿಗಳಿವೆ. ಆದರೆ ಇಷ್ಟು ಹಣ ಸಾದಿಲ್ವಾರ ನಿಧಿಯಿಂದ ಖರ್ಚಿಗೆ ಹೋಗುವುದಿಲ್ಲ. ಇದರಲ್ಲಿ ಇನ್ನೂರ ನಲವತ್ತೆರಡು ಕೋಟಿ ಇಪ್ಪತ್ತೊಂದು ಲಕ್ಷದ ನಲವತ್ತೆರಡು ಸಾವಿರ ರೂಪಾಯಿಗಳು ಕೇಂದ್ರ ಸರ್ಕಾರದ ಸಹಾಯಧನವಾಗಿದೆ. 45 ಕೋಟಿ 56 ಲಕ್ಷ 72 ಸಾವಿರ ರೂಪಾಯಿಗಳು ಸದನದ ಒಪ್ಪಿಗೆ ತೆಗೆದುಕೊಳ್ಳುವಂತಹದು. ಇನ್ನು ರೂ 84,10,73 ಸಾವಿರ ರೂಪಾಯಿ ಅಕೌಂಟಿಗ್ ಅಡ್ಜಸ್ಟ್‌ಮೆಂಟ್. ಸಾಮಾನ್ಯ ರಾಜಸ್ವದಿಂದ ಹೊರಗೆ ಹೋಗುವಂತಹ ಹಣ ರೂಪಾಯಿ 657, 26, 78 ಸಾವಿರ ರೂಪಾಯಿಗಳು ಇದಕ್ಕೆ ಈ ಪೂರಕ ಅಂದಾಜುಗಳಿಗೆ ಸದನದ ಒಪ್ಪಿಗೆ ಕೊಡಬೇಕೆಂದು ನಾವು ಕೇಳಿಕೊಂಡಿದ್ದೇವೆ. ಅದರಲ್ಲೂ ಬಹಳ ಮುಖ್ಯವಾಗಿ ವ್ಯವಸಾಯ ಇಲಾಖೆಗಗೆ 2030 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಶ್ರೀ ಎನ್. ವೈ. ಗೋಪಾಲಕೃಷ್ಣ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದರಲ್ಲಿ ಬಹಳ ಮುಖ್ಯವಾಗಿ ವ್ಯವಸಾಯ ಇಲಾಖೆಗೆ 20 ಕೋಟಿ ರೂಪಾಯಿ, 30 ಕೋಟಿ ರೂಪಾಯಿ ಸೀಡ್ಸ್‌ಗೆ ಸಬ್ಸಿಡಿ ಕೊಡುತ್ತೇವೆ. ಕುಡಿಯುವ ನೀರಿಗೆ ನಾವು ಹೆಚ್ಚುವರಿಯಾಗಿ ಒದಗಿಸಿಕೊಟ್ಟಿದ್ದೇವೆ. ಆಮೇಲೆ ಸ್ವಚ್ಛ ಗ್ರಾಮಕ್ಕೆ 30 ಕೋಟಿ ರೂಪಾಯಿಗಳನ್ನು ಕೊಡತಕ್ಕಂಥದ್ದನ್ನು ಮಾಡಿದ್ದೇವೆ. ಈ ಆಶ್ರಯ ಮನೆಗಳಿಗೆ ಸುಮಾರು ೧೦ ಕೋಟಿ ರೂಪಾಯಿ ಒದಗಿಸತಕ್ಕಂಥಾದ್ದು, ಜೊತೆಗೆ ೫೦ ಕೋಟಿ ರೂಪಾಯಿ ಸಾಲ, ಹುಡ್ಕೋಗ ಸಾಲ ಸಚಿವಾಯ ಮಾಡಬೇಕಾಗಿತ್ತು, ಅದಕ್ಕೆ ಕೂಡ ತಕ್ಕಂಥಾದ್ದು, ಆಮೇಲೆ ಈ ಪೋಲಿಸ್‌ನವರು ವೀರಪ್ಪನ್‌ನ ಬೇಟೆ ಕಾರ್ಯಾಚರಣೆಯಲ್ಲಿ ಕೊಡಬೇಕಾದ್ದು ಅವರಿಗೆ ಕೊಟ್ಟಿಲ್ಲ ಅದೊಂದು, ಮಂಡ್ಯ ಶುಗರ್ ಫ್ಯಾಕ್ಟರಿ ಪುನಾರಾರಂಭ ಮಾಡಲಿಕ್ಕೆ ಅದಕ್ಕೆ ಸ್ವಲ್ಪ ಹಣ ಕೊಡಬೇಕಾಗಿತ್ತು, ಅದಕ್ಕೆ ಕೊಡುತ್ತಿದ್ದೇವೆ. ಆಮೇಲೆ ಈ ಕೆ. ಸಿ. ಸಿ. ಬ್ಯಾಂಕ್ ನಿಂತು ಹೋಗಿತ್ತು ಅದಕ್ಕೊಂದು ಹನ್ನೆರಡೂವರೆ ಕೋಟಿ ರೂಪಾಯಿ ಕೊಡತಕ್ಕಂಥಾದ್ದು ಆಗುತ್ತಿದೆ. ಹೀಗೆ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳಿಗೆ, ಆಮೇಲೆ ಸ್ವಚ್ಛ ಗ್ರಾಮದ್ದು ಕೂಡ ಅದಕ್ಕೆ 30 ಕೋಟಿ ರೂ. ಆಮೇಲೆ ಮೈನರ್ ಇರಿಗೇಷನ್‌ಗೆ ಹೆಚ್ಚುವರಿಯಾಗಿ 30 ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಗೋಡೌನ್‌ಗಳು ಮಾಡಲಿಕೋಸ್ಕರವಾಗಿ 8 ಕೋಟಿ ರೂಪಾಯಿ ಹೆಚ್ಚುವರಿಯಾಗಿ ಕೊಡುತ್ತಿದ್ದೇವೆ. ಲಾ ಡಿಪಾರ್ಟ್‌ಮೆಂಟ್‌ಗೆ ಇವರು ಸ್ಟೇಟ್‌ಲೆವೆಲ್ ಹ್ಯೂಮನ್ ರೈಟ್ಸ್ ಕಮೀಷನ್ ಮತ್ತು ಫಾಸ್ಟ್ ಟ್ರಾಕ್ ಕೋರ್ಟ್ಸ್

ಮಾಡಲಿಕೋಸ್ಕರವಾಗಿ ಅದಕ್ಕೆ ಹಣ ಒದಗಿಸುತ್ತಿದ್ದೇವೆ. ಇವೆಲ್ಲವೂ ಕೂಡ ಹೆಚ್ಚು ಅಭಿವೃದ್ಧಿ ಕೆಲಸಗಳಿಗೆ ಹೆಚ್ಚು ಹಣವನ್ನು ಅಡಿಶನಾಲಿಟಿ, ಮತ್ತೆ ಸಾಲದೇ ಇದ್ದುದ್ದು, ಇದಕ್ಕೋಸ್ಕರ ಮತ್ತೆ ಹೊಸ ಸೇವೆಗಳನ್ನು, ಹೊಸ ಕಾರ್ಯಕ್ರಮಗಳು ನಾವು ಏನು ಘೋಷಣೆ ಮಾಡಿದ್ದೇವೆ ಅವಕ್ಕೆಲ್ಲಾ ಇಲ್ಲಿ ಅಂದಾಜು ತರಿಸಿಕೊಂಡು ಹಣ ಎಷ್ಟು ಕೊಡಬೇಕು ಎನ್ನತಕ್ಕಂಥಾದ್ದನ್ನು ಮಾಡುತ್ತಾ ಇರತಕ್ಕಂಥಾದ್ದು, ಮತ್ತೆ ಇದರಿಂದ ಯಾರೂ ಕೂಡ ಮಾನ್ಯ ಸದಸ್ಯರು ಆತಂಕಪಡಬೇಕಾಗಿಲ್ಲ. ಈ 657 ಕೋಟಿ ರೂಪಾಯಿ ಇದು ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಆಗಿಬಿಡುತ್ತದೆ, ಹಾಗಾಗಿ ಪ್ಲಾನ್‌ಮೇಲೆ ಪರಿಣಾಮ ಬೀರಬಹುದು ಮುಂದಿನ ಬೇರೆ ಬೇರೆ ಕಾರ್ಯಕ್ರಮಗಳಿಗೆ ಹಣ ಕೊರತೆ ಆಗಬಹುದು ಎನ್ನತಕ್ಕಂಥದ್ದಕ್ಕೆ ಯಾರೂ ಕೂಡ ಆತಂಕ ಪಡಬೇಕಾದ ಅಗತ್ಯವಿಲ್ಲ. ನಾವು ಈ ವರ್ಷದ ಪ್ಲಾನ್‌ಸೈಜ್ ಎಷ್ಟು ಇದೆ ಅದನ್ನು ಸಂಪೂರ್ಣವಾಗಿ ರೀಚ್ ಮಾಡುತ್ತೇವೆ. ಅಷ್ಟಕ್ಕೂ ಕೂಡ ಹಣ ಒದಗಿಸತಕ್ಕಂಥ ಕೆಲಸ ಮಾಡುತ್ತೇವೆ. ಮತ್ತೆ ಈ ಅಡಿಷನಲ್ ಅಭಿವೃದ್ಧಿ ಕೆಲಸಗಳು ಎನಿವೆ ಇದಕ್ಕೂ ಹಣ ಕೊಟ್ಟಿದ್ದೇವೆ. ಇದರ ಜೊತೆಗೆ ಇವೆಲ್ಲಾ ಕೂಡ ರಾಜ್ಯದ ಅಭಿವೃದ್ಧಿಗೋಸ್ಕರವಾಗಿ ಇಷ್ಟು ಹಣ ನಾವು ಒದಗಿಸುತ್ತಾ ಇರತಕ್ಕಂಥಾದ್ದು, ಇದಕ್ಕೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕು ಅಂತ ಹೇಳಿ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ ಇದರ ಮೇಲೆ ಚರ್ಚೆಯನ್ನು ನಾವು ಮಧ್ಯಾಹ್ನದ ಮೇಲೆ ಮಾಡೋಣ ಅದರ ಪ್ರತಿಗಳು ನಮಗೆ ಈಗ ಸಿಕ್ಕಿವೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಮಧ್ಯಾಹ್ನದ ಮೇಲೆ ಚರ್ಚೆಗೆ ತೆಗೆದುಕೊಳ್ಳಿ ಸಾರ್, ಮಾಹಿತಿ ಜಾಸ್ತಿ ಇದೆ. ನಮಗೆ ಮಾಹಿತಿ ಈಗ ಕೊಟ್ಟಿದ್ದಾರೆ. ಈಗ ಬೇರೆ ಯಾವುದಾದರೂ ಒಂದು ವಿಷಯವನ್ನು ಚರ್ಚೆಗೆ ತೆಗೆದುಕೊಂಡರೆ ಅಷ್ಟರಲ್ಲಿ ಇದನ್ನು ನಾವು ನೋಡಬಹುದು.

ಶ್ರೀ ವಾಟಾಳ್ ನಾಗರಾಜ್ : ಅನೇಕ ವಿಚಾರಗಳು ಚರ್ಚೆಯಾಗತಕ್ಕಂಥಾದ್ದು ಇದೆ ಊಟವಾದ ಮೇಲೆ ತಾವು ಅವಕಾಶ ಮಾಡಿ ಕೊಡಿ. 300 ಗಂಟೆಯ ಮೇಲೆ, ತೆಗೆದುಕೊಳ್ಳೋಣ.

ಉಪಾಧ್ಯಕ್ಷರು : ಇನ್ನೂ ಟೈಮ್ ಇದೆಯಲ್ಲಾ.

ಶ್ರೀ ಜೆ. ಸಿ. ಮಾಧುಸ್ವಾಮಿ : ಓದಬೇಕಲ್ಲಾ ಸಾರ್, ಈಗ ಕೊಟ್ಟಿದ್ದಾರೆ ಸಾರ್, ನಮಗೆ ಕಾಪಿ ಸಿಕ್ಕಿಲ್ಲ ಬೇರೆ ಯಾವುದಾದರೂ ಬಿಸಿನೆಸ್ ತೆಗೆದುಕೊಂಡು ಲಂಚ್ ಆದಮೇಲೆ ತೆಗೆದುಕೊಳ್ಳಿ ಸಾರ್.

ಶ್ರೀ ಸಿ. ಎಸ್. ನಾಡಗೌಡ : ಮಾನ್ಯ ಉಪಾಧ್ಯಕ್ಷರೆ, ಫೈನಾನ್ಸಿಯಲ್ ಬಿಲ್ ಇದೆ. ಅದಕ್ಕೆ ಪ್ರಿಯಾರಿಟಿ ಕೊಡಬೇಕಾಗುತ್ತದೆ. ಅವರು ಏನಾದರೂ ಕ್ಲಾರಿಫಿಕೇಶನ್ ಇದ್ದರೆ ಕೇಳಿ ಕೊಳ್ಳಲಿ.

ಶ್ರೀ ಜೆ. ಸಿ. ಮಾಧುಸ್ವಾಮಿ : ಇನ್ನೊಂದು ಯಾವುದಾದರೂ ವಿಷಯ ತೆಗೆದುಕೊಂಡು ಒಂದು ಅರ್ಧ ಗಂಟೆ ಸಮಯ ಕೊಡಿ ಅಂತ ನಾವು ಕೇಳುವುದು ಒಂದು ಸಲ ತಿರುಗಿಸಿ ನೋಡುವುದಾದರೂ ಬೇಡವೆ? ರೂಲ್ 69 ಯಾವುದಾದರೂ ತೆಗೆದುಕೊಂಡು ಚರ್ಚೆಮಾಡಲಿ ಸಾರ್. ಒಂದೋ ಎರಡೋ ಯಾವುದಾದರೂ ನೋಡುವುದಕ್ಕಾಗುತ್ತದೆ. ರೂಲ್ 69 ತೆಗೆದುಕೊಳ್ಳಿ ಸಾರ್.

ಶ್ರೀ ಆರ್. ವಿ. ದೇಶಪಾಂಡೆ : ಇದು ಫೈನಾನ್ಷಿಯಲ್ ಬಿಲ್ ತಾವು ಎಲ್ಲಾ ಎಕ್ಸ್‌ಪರ್ಟ್ಸ್ ಇದ್ದೀರಿ ಮಾತನಾಡಿ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ದೇಶಪಾಂಡೆಯವರೇ, 600 ಕೋಟಿ ರೂ. ಚಿಲ್ಲರೆ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಇಟ್ಟು ಒಂದು ನಿಮಿಷಕ್ಕೆ ಏನೂ ನೋಡದಂತೆ ಪಾಸ್ ಮಾಡಿ ಅಂದರೆ ಹೇಗೆ ಅವತ್ತು ಸೇರಿಸದೆ ಇವತ್ತು ಸೇರಿಸಿರುವುದು. ದಯವಿಟ್ಟು ಕಾಲಾವಕಾಶ ಕೊಡಿ. ಮಧ್ಯಾಹ್ನ ಫಿಕ್ಸ್ ಮಾಡಿ ಕೊಡಿ ಸಾರ್ ಒಂದು ಅರ್ಧ ಗಂಟೆ.

ಉಪಾಧ್ಯಕ್ಷರು : ನೀವು ತಯಾರಿ ಇಲ್ಲದಿದ್ದರೂ ಮಾತನಾಡುವಷ್ಟು ಸಾಮರ್ಥ್ಯ ಇದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಯಾವ ಯಾವುದರಲ್ಲಿ ಎಷ್ಟೇಷ್ಟು ಇದೆ ಎನ್ನುವುದು ನೋಡುವುದು ಬೇಡವೆ? ಸುಮ್ಮನೆ ಮಾತನಾಡುವುದ ಕ್ಕಾಗುತ್ತದೆಯೇ?

ಉಪಾಧ್ಯಕ್ಷರು : ಮಾನ್ಯ ಜಗದೀಶ ಶೆಟ್ಟರ್, ನೀವೇನಾದರೂ ಮಾತನಾಡುತ್ತೀರಾ? ಇನ್ನೂ ಅರ್ಧ ಗಂಟೆ ಟೈಮ್ ಇದೆಯಲ್ಲಾ.

ಶ್ರೀ ಪಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದಂತಹ ವಿಚಾರ ಚರ್ಚೆ ಮಾಡಬೇಕಾಗುತ್ತದೆ. ಮಧ್ಯಾಹ್ನ ತೆಗೆದುಕೊಳ್ಳಿ.

ಉಪಾಧ್ಯಕ್ಷರು . ಈಗ ಸಮಯ ಒಂದು ಗಂಟೆ

ಶ್ರೀ ಜೆ. ಸಿ. ಮಾಧುಸ್ವಾಮಿ : ಆಗಲಿ ಬಿಡಿ ಸಾರ್, ಊಟ ಮಾಡಿ ಬಂದು ಚರ್ಚೆ ಮಾಡೋಣ.

ಉಪಾಧ್ಯಕ್ಷರು : ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ನನ್ನ ಇಲಾಖೆಗೆ ಸಂಬಂಧಪಟ್ಟ 3 ಬಿಲ್‌ಗಳು ಇವೆ. ಅದನ್ನು 10 ನಿಮಿಷದಲ್ಲಿ ತೆಗೆದುಕೊಳ್ಳಬಹುದು.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ತೆಗೆದುಕೊಂಡರೆ ಮಾನ್ಯ ಸಚಿವರು ಉಳಿದವರು ಬರಬೇಕಾಗುತ್ತದೆ. ಅದಕ್ಕೆ ಕಾಲಾವಕಾಶ ಕೊಡಬೇಕಾಗುತ್ತದೆ. ಆದ್ದರಿಂದ ಊಟದ ನಂತರ ಪ್ರಶ್ನೋತ್ತರ ತೆಗೆದುಕೊಳ್ಳಿ, ಈಗ ಏನು 3 ಬಿಲ್‌ಗಳು ಉಳಿದಿವೆ ಅವು ಬಹಳ ಸಣ್ಣ ಬಿಲ್‌ಗಳು ಅವುಗಳನ್ನು ತೆಗೆದುಕೊಳ್ಳಿ.

ಶ್ರೀ ತನ್ವೀರ್ ಸೇಠ್ : (ಕಾರ್ಮಿಕ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಬಿಲ್‌ಗಳನ್ನು ಕಳೆದ ತಿಂಗಳು 13ನೇ ತಾರೀಖು ಮಂಡಿಸಿದ್ದೇನೆ.

5. ಶಾಸನ ರಚನೆ.

ಅ. ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ 2005.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, 2005ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.